ಆದರೆ ಬಹು ಭಾಗದ ಜನ ಹಿಂದೆ ತಮ್ಮ ಗ್ರಾಮಗಳು ಎಲ್ಲಿತ್ತೋ ಅಲ್ಲೇ ಎಂದರೆ ತಮ್ಮ ಹಳೆಯ ಗ್ರಾಮಗಳು ಮುಳುಗಡೆಯಾದ ನಂತರ—ಮೇಲ್ಬಾಗದಲ್ಲಿ ಗುಡಿಸಲು ಹಾಕಿಕೊಂಡು, ಅವರಿಗೆ ಸರಿಯಾದ ಜೀಸಾಯಕ್ಕೆ ಯೋಗ್ಯವಾದ ಜಮೀನು ಕೂಡ ಇಲ್ಲದೆ, ಬಂಜರು ಬಿದ್ದಿದ್ದಂಥ ಜಮೀನನ್ನು ಸಾಗುವಳಿಗೆ ತೆಗೆದುಕೊಂಡು ಈ ದಿವಸ ಅವರು ನಮ್ಮ ದೇಶದಲ್ಲಿ ಪಾಕೀಸ್ತಾನದಿಂದ ಬಂದಿದ್ದಂಥ ನಿರಾಶ್ರಿತರ ಸ್ಥಿತಿಯಲ್ಲಿ ಇದ್ದಾರೆ. ಅವರು ತಮಗೆ ವ್ಯವಸಾಯಾನುಕೂಲತೆ, ನೀರಾವರಿ ಸೌಕರ್ಯಬೇಕು ಎಂದು ಹೇಳಿ ಕಳೆದ 30 ವರ್ಷಗಳಿಂತಲೂ ಕೂಡ ಸರ್ಕಾರದವರಲ್ಲಿ ಅನೇಕ ಮನವಿಗಳನ್ನು ಸಲ್ಲಿಸಿದ್ದಾರೆ. ಆದರೂ ಕೂಡ ಸರ್ಕಾರದವರು ಈ ತಹಲ್‌ವರೆಗೂ ಗಮನ ಕೊಟ್ಟಿಲ್ಲ. ಮೂರು ತಿಂಗಳ ಹಿಂದೆ ದೊಡ್ಡನ ಕಟ್ಟೆ ಗ್ರಾಮದ ಬಳಿ ಕಟ್ಟಬೇಕೆಂದು ಉದ್ದೇಶಿಸಿದ್ದ ಅಣೆ ಕೆಲಸವನ್ನು ಕೂಡ ಉಪೇಕ್ಷೆ ಮಾಡಲಾಗಿದೆ. ಹಿಂದೆ ಮಂತ್ರಿಗಳಾಗಿದ್ದಂಥ ಶ್ರೀ ಮರಿಯಪ್ಪನವರು ಮತ್ತು ಶ್ರೀ ಭಾಷ್ಯಂರವರು ನಹ ಆ ಸ್ಥಳಕ್ಕೆ ಬಂದು ಖುದ್ದಾಗಿ ಅಜಮಾಯಿಷಿಮಾಡಿ ಈ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುತ್ತೇವೆಂದು ಆ ಪ್ರದೇಶದ ಜನರಿಗೆ ಭರವಸೆಯನ್ನು ಕೂಡ ಕೊಟ್ಟಿದ್ದರು. ಆದರೆ ಆ ಯೋಜನೆ ಯಾವ ಕಾರಣಕ್ಕೋ ಪಂಚವಾರ್ಷಿಕ ಯೋಜನೆಯಲ್ಲಿ ಸೇರಲಿಲ್ಲ. ಕಾರಣ ನಮಗಂತೂ ಗೊತ್ತಾಗಿಲ್ಲ. ಈಗಲೂ ಕೂಡ ಸರ್ಕಾರದವರು ಉದಾಸೀನಮಾಡದೆ ಕೂಡಲೆ ಈ ಯೋಜನೆಯನ್ನು ತೆಗೆದುಕೊಂಡು ಇದರ ಕಾರ್ಯವನ್ನು ಬೇಗ ಮುಗಿಸಿ ಆ ಪ್ರದೇಶದಲ್ಲಿ ನೊಂದ ರೈತರಿಗೆ ಅನುಕೂಲಮಾಡಿ ಕೊಡಬೇಕು ಎಂದು ಸೂಚಿಸಿ ನನ್ನ ಖೋತಾ ಸೂಚನೆಯನ್ನು ಮಂಡಿಸುತ್ತೇನೆ.

Mr. SPEAKER.—Cut motion moved;

"That the demand be reduced by Rs. 100".

Sri Kadidal MANJAPPA.—Sir, an estimate amounting to Rs. 3.45 lakhs for the construction of this *ane* has been received just recently. It will be examined and I believe a grant of Rs. 5,000 in the Budget for the year 1954-55 is made. I hope we will be able to take up the work very soon. With this assurance I request the Hon'ble member to withdraw his cut motion.

ಶ್ರೀ ಎಸ್. ಎಂ. ಲಿಂಗಪ್ಪ.—ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Mr. SPEAKER.—The House will now rise for lunch and meet at 3-30 P.M.

The House adjourned for Lunch at Four Minutes past Three of the Clock and reassembled at Thirty Minutes past Three of the Clock.

[MR. SPEAKER IN THE CHAIR.]

Necessity for employing a man to keep watch over the Sige Halla Oddu during rainy season.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—"'18 ಸಾಮಾನ್ಯ ಹುಟ್ಟುವಳಿಯಿಂದ ಹೊಣೆನ್ನೊದಗಿಸಿತಕ್ಕ ಇತರ ರೆವೆನ್ಯೂ ಪೆಟ್ಟಿಗಳು' ಎಂಬ ಬಾಬಿನಲ್ಲಿ ಕೋರಿರತಕ್ಕ 61,09,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಸೀಗೇ ಹಳ್ಳ ಒಡ್ಡನ್ನು ಪೂರ್ತಿಮಾಡಿದಾಗಿನಿಂದ ಅದನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿಲ್ಲದೇ ಹೋಗಿರುವುದರಿಂದಲೂ ನೀರು ಹಾಯಿಸುವುದನ್ನು ಕ್ರಮಪಡಿಸದೇ ಇರುವುದರಿಂದಲೂ ಮಳೆಗಾಲದಲ್ಲಿ ನಾಲೆಯನ್ನೂ ಮತ್ತು ತೂಬನ್ನೂ ನೋಡಿಕೊಳ್ಳುವುದಕ್ಕಾಗಿ ಒಬ್ಬನನ್ನು ನೇಮಕ ಮಾಡುವುದಕ್ಕೆ ಹಣವನ್ನೊದಗಿಸುವುದು ಅವಶ್ಯಕವಾಗಿದೆಯೆಂಬ ವಿಚಾರವನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕಾಗಿ)." ಎಂಬ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಇಟ್ಟಿರುತ್ತೇನೆ. ಈಗ 4 ವರ್ಷಗಳ ಕೆಳಗೆ ಈ ಸೀಗೇಹಳ್ಳ ಒಡ್ಡು ಆಗಿದ್ದರೂ ಕೂಡ ಇಲ್ಲಿಯವರೆಗೂ ಅದರ ಕೆಳಗಿರುವ ಕೆರೆಗಳಿಗೆ ನೀರು ಒದಗುತ್ತಿಲ್ಲ. ಆಯನೂರು ಗೌಡನ ಕೆರೆಗೆ ಬರುವ ಕಾಲುವೆಯ ಅಗಲ ಕಡಮೆಯಾಗಿರುವುದರಿಂದ ನೀರು ಹೊರಳಿ ನರಿಯಾಗಿ ನರಬರಾಯಾಗುತ್ತಿಲ್ಲ. ಅಲ್ಲಿ ಅದರ ಮೇಲುಸ್ತುವಾರಿ ನೋಡಿಕೊಳ್ಳುವರು ಯಾರೂ ಇಲ್ಲ. ಜನರು ಅಲ್ಲಲ್ಲೇ ನಾಲೆಯನ್ನು ಒಡೆದು ನೀರು ಪೋಲಾಗುತ್ತಿರುವುದರಿಂದ ಆ ಒಡ್ಡಿನ ಕೆಳಗಿರುವ ಕೆರೆಗಳಿಗೆ ನೀರು ಸರಿಯಾಗಿ ಬಾರದೆ ಬೆಳೆಗೆ ತೊಂದರೆಯಾಗಿದೆ. ಕೆರೆಗೆ ನೀರು ಬಂದಿಲ್ಲ, ರೈತರಿಗೆ ಅನಾನುಕೂಲವಾಗಿದೆ ಎಂದು ಪಬ್ಲಿಕ್‌ವರ್ಕ್ಸ್ ಇಲಾಖೆಯವರಿಗೆ ಹೇಳಿದರೆ ನಮಗೆ ಅದರ ಭಾರ್ಜು ಕೊಟ್ಟಿಲ್ಲವೆಂದು ಹೇಳುತ್ತಾರೆ. ಅಲ್ಲಿರುವ ಓವರ್‌ಸಿಯರು ಸಹ ಇದರ ಉಸ್ತುವಾರಿ ನೋಡುವುದಿಲ್ಲ. ಸುಮಾರು 3-4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆ ಒಡ್ಡನ್ನು ಕಟ್ಟಿದರೆ ಸುಮಾರು 3-4 ಸಾವಿರ ಎಕರೆಗಳಿಗೆ ನೀರು ಬರುತ್ತದೆಯೆಂದು ಹೇಳಿದರು. ಆದರೆ ಈಗ 200-300 ಎಕರೆಗಳಿಗೂ ನೀರು ಒದಗಿಲ್ಲ. ಆದ್ದರಿಂದ ಸರಿಯಾಗಿ ಕಾಲುವೆಯನ್ನು ನೋಡಿಕೊಳ್ಳುವುದಕ್ಕೂ ಮತ್ತು ಹೆಚ್ಚಿನ ಪ್ರದೇಶಕ್ಕೆ ನೀರು ಕೊಡುವುದಕ್ಕೂ ಅನುಕೂಲವಾಗುವ ಹಾಗೆ ಸೀಗೆ ಹಳ್ಳದ ಮೇಲು ಭಾಗದಲ್ಲಿ ಹಳ್ಳವಿರುವುದನ್ನು ಅಡ್ಡಕಟ್ಟಿ ಇದೇ ನಾಲೆಗೆ ತಿರುಗಿಸಿದರೆ ಹೆಚ್ಚು ನೀರು ಒದಗುವುದು. ಸಮವಾಗಿ ಕಾಲುವೆ ತಂದು ಕಾಲುವೆಯನ್ನೂ ತೂಬನ್ನೂ ಸರಿಪಡಿಸಿ ಯೋಜನೆ ಮಾಡಿರುವುದಕ್ಕೆ ತಕ್ಕ ಹಾಗೆ ಎಲ್ಲ ಪ್ರದೇಶಕ್ಕೂ ನೀರನ್ನೊದಗಿಸುವಂತೆ ಏರ್ಪಾಡು ಮಾಡಬೇಕೆಂದು ಹೇಳಿ ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100".

Sri Kadidal MANJAPPA.—Sir, we take necessary steps to make the improvements suggested by the Hon'ble Member.

The cut motion was, by leave, withdrawn.